

ಶರನ್ನವರಾತ್ರಿ ಹಬ್ಬಕ್ಕೆ ಇನ್ನು ಕೆಲವೇ ದಿನಗಳು ಬಾಕಿ. ಹಬ್ಬವನ್ನು ಹೆಚ್ಚು ಅರ್ಥಪೂರ್ಣವಾಗಿಸಲು ಹಾಗೂ ಕಲರ್‌ಫುಲ್ ಆಗಿ ಆಚರಿಸಲು ಈಗ ಕಾಲ ಸನ್ನಿಹಿತವಾಗಿದೆ. ಫ್ಯಾಷನ್ ಜಗತ್ತು ಕೂಡ ಅದ್ಧೂರಿಯಾಗಿ ಹಬ್ಬ ಆಚರಿಸಲು ಸಜ್ಜಾಗಿದೆ. ನವರಾತ್ರಿ ಹಬ್ಬದಂದು ಬಣ್ಣಗಳಿಗೆ ವಿಶೇಷ ಮಹತ್ವ ಇದೆ. ದುರ್ಗೆ, ಕಾಳಿ, ಸರಸ್ವತಿ ಮುಂತಾದ ದೇವಾನುದೇವತೆಗಳನ್ನು ಪ್ರಸನ್ನಗೊಳಿಸಲು ಒಂಬತ್ತು ದಿನಗಳೂ ಬೇರೆ ಬೇರೆ ಬಣ್ಣದ ಉಡುಪು ಧರಿಸಿ ಪೂಜೆ ಮಾಡಬೇಕು ಎನ್ನುವುದು ನಂಬಿಕೆ.

ಶರನ್ನವರಾತ್ರಿಯ ಒಂಬತ್ತು ದಿನಗಳಿಗೂ ಒಂದೊಂದು ಬಣ್ಣ ಎಂಬುದನ್ನು ನಿಗದಿ ಮಾಡಲಾಗಿದೆ. ದುರ್ಗೆಯ ಆರಾಧನೆ ಅನುಸರಿಸಿ ಕಿತ್ತಳೆ, ಬಿಳಿ, ಕೆಂಪು, ನೀಲ, ಹಳದಿ, ಹಸಿರು, ಕಂದು, ನೇರಳೆ ಹಾಗೂ ನವಿಲಿನ ಬಣ್ಣಗಳ ಸೀರೆಗಳನ್ನು ಒಂಬತ್ತು ದಿನಗಳಲ್ಲಿ ಉಟ್ಟು ಸಂಭ್ರಮಿಸಬಹುದು.

ದೇವಿಯ ಅವತಾರಗಳಾದ ಶೈಲಪುತ್ರಿ, ಬ್ರಹ್ಮಚಾರಿಣಿ, ಚಂದ್ರಘಂಟಾ, ಕೂಷ್ಮಾಂಡಿನಿ, ಸ್ಕಂದ ಮಾತೆ, ಕಾತ್ಯಾಯಿನಿ, ಕಾಳರಾತ್ರಿ, ಮಹಾಗೌರಿ ಹಾಗೂ ಸಿದ್ಧಿಧಾತ್ರಿ ದೇವಿಗೆ ಆರಾಧನೆ ಮಾಡಿದರೆ ಒಳ್ಳೆಯದು ಎಂಬುದು ನಂಬಿಕೆ. ಆದರೆ ಕಪ್ಪು ಬಣ್ಣ ದುಃಖದ ಸಂಕೇತವಾದ್ದರಿಂದ ಈ ಬಣ್ಣಕ್ಕೆ ನವರಾತ್ರಿ ಹಬ್ಬದಂದು ಸ್ಥಾನವಿಲ್ಲ.

### ಹಬ್ಬಕ್ಕೆ ಬೇಕು ರೇಷ್ಮೆ ಸೀರೆ!

ಸೀರೆಯನ್ನು ನೋಡಿದ ಕೂಡಲೇ ಇಕೋ ತಗೋ ಎಂದು ಕೈಬೀಸಿ ಕರೆಯುವ ಇಕತ್ ಸೀರೆ, ಚಂದ ಚಂದದ ಚಂದೇರಿ ಸೀರೆ, ಸೀಕ್ವೆನ್ಸ್ ಸಿರೀಸ್‌ನಂತೆ ಚೌಕುಳಿಯ ಇಳಕಲ್ ಸೀರೆ, ಉಟ್ಟರೆ ಉಟ್ಟಂತೆ ಅನಿಸದೆ ಎಂದಿಗೂ ನೀಟಾಗಿ ನಿಲ್ಲುವ ಖಾದಿ ಸೀರೆ, ಶುಭಕಾರ್ಯಗಳಿಗೆ ಬಳಸಲೆಂದೇ ಇರುವ ಮಂಗಳಗಿರಿ ಸೀರೆ, ಫ್ಯಾಷನ್‌ಪ್ರಿಯರಿಗಾಗಿಯೇ ಬಂದಿರುವ ಬೊಮ್ಮಾಯ್ ಸೀರೆ, ಎಂದಿಗೂ ಅಂದಗೆಡದ ಕುಂದಲಮ್ ಸೀರೆ... ಹತ್ತಾರು ಬಣ್ಣಗಳ ನೂರಾರು ವಿನ್ಯಾಸ ವೈವಿಧ್ಯಗಳ ಸೀರೆಗಳು ಅಲ್ಮೆರಾ ತುಂಬ ಮ್ಯಾಚಿಂಗ್ ಬ್ಲೌಸ್‌ಗಳೊಂದಿಗೆ ಒಪ್ಪವಾಗಿ ಜೋಡಿಸಿಟ್ಟರೂ ಏನೋ ಒಂದು ಕೊರತೆ. ಎಷ್ಟು ಸೀರೆಗಳಿದ್ದರೇನು, ಸೀರೆಗಳ ರಾಣಿ ರೇಷ್ಮೆ ಸೀರೆ ಇಲ್ಲದೇ ಹೋದರೆ ಇಡೀ ಅಲ್ಮೆರಾ ತುಂಬಿದ ಸೀರೆಗಳೆಲ್ಲ ವ್ಯರ್ಥ ಎನ್ನುವ ಮನೋಭಾವ ಹೆಂಗಳೆಯರದ್ದು.

ರೇಷ್ಮೆ ಸೀರೆಯ ಸೊಬಗು, ವೈಭವ, ವೈಯ್ಯಾರವೇ ಬೇರೆ. ಅಪ್ಪಟ ಮೈಸೂರು ರೇಷ್ಮೆ ಸೀರೆ ಉಟ್ಟರೆ ಹಬ್ಬ ಹರಿದಿನ, ಮದುವೆ ಮುಂಜಿ ಕಳೆಕಟ್ಟುವುದೇ ಬೇರೆ ಥರ. ಕಡುಬಣ್ಣದ ಸೀರೆಗೆ ಕಾಂಟ್ರಾಸ್ಟ್ ಕಲರ್‌ನ ಪಲ್ಲು, ಕಣ್ಣು ಬಿಟ್ಟಂತೆ ಅಲ್ಲಲ್ಲಿ ಎದ್ದುಕಾಣುವ ಬುಟ್ಟಾ ಸೀರೆ, ಚಿನ್ನದ ಬಣ್ಣದ ಜರಿ ಬಾರ್ಡರ್... ಇವೆಲ್ಲ ವೈವಿಧ್ಯಗಳ ರೇಷ್ಮೆ ಸೀರೆಯಲ್ಲೂ ನಾ ಮುಂದು ತಾ ಮುಂದು ಎನ್ನುವ ಕಾಂಜೀವರಂ, ಬನಾರಸ್, ಜಾರ್ಜೆಟ್, ಶಿಫಾನ್, ಕಂಚಿ, ಮೊಳಕಾಲ್ಮೂರು ರೇಷ್ಮೆ ಸೀರೆಗಳು ಮಹಿಳೆಯರ ತಿಜೋರಿ ತುಂಬಲು ಹಾತೊರೆಯುತ್ತವೆ, ಒಡಲಿಗೆ ಸುತ್ತಿಕೊಂಡರೆ ಜಗತ್ತಿಗೇ ತಾನೇ 'ತ್ರಿಪುರ ಸುಂದರಿ'ಎನ್ನುವ ಮನೋಭಾವ ಮಹಿಳೆಯದ್ದು.

ಎಲ್ಲ ಹಬ್ಬಗಳೊಂದಿಗೆ ಫ್ಯಾಷನ್ ಕೂಡ ಬಾಂಧವ್ಯ ಬೆಸೆದಿದೆ. ರೇಷ್ಮೆ ಸೀರೆ, ಎಥ್ನಿಕ್ ಉಡುಪು, ಖಾದಿ ಉಡುಗೆ, ಅಲಂಕಾರಿಕ ಸಾಧನಗಳು ಸಂಪ್ರದಾಯ–ಫ್ಯಾಷನ್ ಜೊತೆಗೆ ಸೇರಿ ಹಬ್ಬದ ಸಂಭ್ರಮವನ್ನು ಇಮ್ಮಡಿಸುತ್ತಿವೆ.

ಫ್ಯಾಷನ್ ಜಗತ್ತು ಎಷ್ಟೇ ಆಧುನಿಕತೆಯತ್ತ ದಾಪುಗಾಲು ಹಾಕಿದರೂ ಅನಾದಿ ಕಾಲದಿಂದ ಮಹಾರಾಣಿಯಂತೆ ಮೆರೆದುಕೊಂಡು ಬರುತ್ತಿರುವ ರೇಷ್ಮೆ ಸೀರೆಯನ್ನು ಹಿಂದಿಕ್ಕಲು ಯಾವ ಸೀರೆಗಳಿಂದಲೂ ಸಾಧ್ಯವಾಗಿಲ್ಲ. ಎಂದೆಂದೂ ಔಟ್‌ಡೇಟೆಡ್ ಆಗದೇ ಇರುವಂಥ ಉಡುಗೆ ಎಂದೇ ಖ್ಯಾತಿ ಗಳಿಸಿ ಗಟ್ಟಿತನ, ಅಂದ, ಶ್ರೀಮಂತಿಕೆ ಎಲ್ಲದರಲ್ಲೂ ಮೇಲ್ಪಂಕ್ತಿ ಹಾಕಿವೆ ಈ ರೇಷ್ಮೆ ಸೀರೆಗಳು.

### ನವರಾತ್ರಿಗಾಗಿಯೇ ಎಥ್ನಿಕ್ ಸಂಗ್ರಹ

ಹಬ್ಬದ ಸಂದರ್ಭದಲ್ಲಿ ಎಥ್ನಿಕ್ ಉಡುಪುಗಳನ್ನು ಧರಿಸುವುದು ಟ್ರೆಂಡ್. ಈ ಉಡುಪುಗಳು ಸಂಪ್ರದಾಯಕ್ಕೂ ಆಧುನಿಕತೆಗೂ ಸೈ ಎನಿಸಿವೆ. ಹೀಗಾಗಿ ಎಲ್ಲ ವಯೋಮಾನದ ಮಹಿಳೆಯರನ್ನು ಸಮಾನವಾಗಿ ಸೆಳೆಯುತ್ತದೆ. ಎಥ್ನಿಕ್ ಸೀರೆ ಫ್ಯಾಷನಬಲ್ ಆಗಿದ್ದು, ಬಹು ವರ್ಣದ ಸೀರೆಗಳು, ಒಂದೇ ಸೀರೆಯಲ್ಲಿ ಹಲವು ಬಣ್ಣಗಳಿಂದ ಕೂಡಿದ ಸೀರೆ ಕೂಡ ಸಖತ್ ಲುಕ್ ಕೊಡುತ್ತದೆ.

ನವರಾತ್ರಿ ಹಬ್ಬದಂಥ ಸಂದರ್ಭದಲ್ಲಿ ಎಥ್ನಿಕ್ ಉಡುಪುಗಳೂ ಇಂದು ಎಲ್ಲೆಡೆ ಲಭ್ಯ. ದೇವಿ ಪೂಜೆ ಮಾಡುವ ಮಹಿಳೆಯರು ಹೆಚ್ಚಾಗಿ ಎಥ್ನಿಕ್ ಉಡುಗೆಯನ್ನೇ ಮೆಚ್ಚುತ್ತಾರೆ. ಜತೆಗೆ ಸಾಮೂಹಿಕವಾಗಿ ಎಲ್ಲ ಮಹಿಳೆಯರು ಒಂದೇ ರೀತಿಯ ಸೀರೆ ಉಟ್ಟು ಸಂಪ್ರದಾಯ ಮೆರೆಯುತ್ತಾರೆ. ನವರಾತ್ರಿ ಹಬ್ಬದ ಎಲ್ಲ ದಿನಗಳಲ್ಲೂ ಮಹಿಳೆಯರು ಸೇರಿ ಸೌಂದರ್ಯಲಹರಿ ಪಾರಾಯಣ ನಡೆಸುತ್ತಾರೆ. ಆಗ ಒಂದೇ ರೀತಿಯ ಸೀರೆಗಳನ್ನು ಉಟ್ಟು ಸಮಾನತೆ ಸಾರುವ ಉದ್ದೇಶವೂ ಹಬ್ಬದ ಸಾರ್ಥಕತೆಗೆ ಸಾಕ್ಷಿಯಾಗುತ್ತದೆ.

ಬಟ್ಟೆ, ಬಣ್ಣ, ಸ್ಟೈಲ್, ಗ್ಲಾಮರ್ ಮುಂತಾದವುಗಳ ಲೆಕ್ಕಾಚಾರದಿಂದ ಸೀರೆ ಕೊಳ್ಳುವ ಮಹಿಳೆಯರೂ ಹಬ್ಬದ ವಿಷಯಕ್ಕೆ ಬಂದಾಗ ಹೆಚ್ಚು ಒತ್ತು ಕೊಡುವುದು ಎಥ್ನಿಕ್ ಉಡುಪುಗಳಿಗೇ.

### ದಾಂಡಿಯಾ ರಾತ್ರಿ

ಉತ್ತರ ಭಾರತದಲ್ಲಿ ನವರಾತ್ರಿ ಸಂಭ್ರಮ ಜೋರು. ದುರ್ಗಾ ಪೂಜೆ ಸೇರಿದಂತೆ ದಾಂಡಿಯಾ ರಾತ್ರಿಗಳು ಎನ್ನಲಾಗುವ ನವರಾತ್ರಿ ದಿನಗಳಲ್ಲಿ ಮಹಿಳೆಯರು ಬಾಂದನಿ ಪ್ರಿಂಟ್ಸ್ ಇರುವ ಸ್ಕರ್ಟ್, ಸ್ಟೇಟ್‌ಮೆಂಟ್ ಆಭರಣ ಧರಿಸಿ ಸಂಭ್ರಮಿಸುವುದು ಇದೆ. ಇದೇ ಉಡುಪಿನಲ್ಲಿ ಎಲ್ಲ ಮಹಿಳೆಯರು ಕಲೆತು ನೃತ್ಯ ಮಾಡಿ ಹಬ್ಬವನ್ನು ಇನ್ನಷ್ಟು ಅರ್ಥಪೂರ್ಣವಾಗಿಸುತ್ತಾರೆ. ಸಾಮಾನ್ಯವಾಗಿ ಹಸಿರು–ಹಳದಿ ಪ್ರಿಂಟ್ಸ್ ಇರುವ ಬಾಂದನಿ ಉಡುಪುಗಳು, ಸ್ಲೀವ್‌ಲೆಸ್ ಸಾಲಿಡ್ ಬ್ಲ್ಯಾಕ್ ಕಲರ್ ಉಡುಪಿನ ಜತೆಗೆ ಸಿಲ್ವರ್ ಜಿಯೊಮೆಟ್ರಿಕ್ ಪ್ಯಾಟರ್ನ್ ಇರುವ ನೆಕ್‌ಪೀಸ್, ಸಿಲ್ವರ್ ಮೆಟಾಲಿಕ್ ಪೆಂಡೆಂಟ್, ನೆಕ್ಲೇಸ್, ವುಡನ್ ಬ್ಯಾಂಗಲ್ ಸೆಟ್, ಆ್ಯಂಟಿಕ್ ಫಿನಿಷ್ ಸಿಲ್ವರ್ ಟೆಂಪಲ್ ನೆಕ್ಲೇಸ್ ಮುಂತಾದವು ದಾಂಡಿಯಾ ರಾತ್ರಿಗೆ ಸೂಕ್ತವಾದವು.

ಇಂದು ಆಧುನಿಕ ಉಡುಪುಗಳೂ ಸಾಂಪ್ರದಾಯಿಕತೆ ಜೊತೆಗೆ ಬಾಂಧವ್ಯ ಬೆಸೆದಿವೆ. ಜೀನ್ಸ್ ಪ್ಯಾಂಟ್‌ನೊಂದಿಗೆ ಎಥ್ನಿಕ್ ಟಾಪ್ ಮತ್ತು ಜುಮ್ಕಾ ಧರಿಸಿ ಹಬ್ಬಕ್ಕೆ ಕಳೆಕಟ್ಟಬಹುದು, ಗ್ರೀನ್ ಕಾಟನ್ ಫ್ಲೋರಲ್ ಹ್ಯಾಂಡ್ ಪ್ರಿಂಟೆಡ್ ಟಾಪ್, ಬ್ಲೂ ಜೀನ್ಸ್, ಮಲ್ಟಿ ಕಲರ್ ಎಂಬ್ರಾಯಿಡರಿ ವರ್ಕ್ ಉಡುಪುಗಳಿಗೆ ಮ್ಯಾಚಿಂಗ್ ಆಗಲು ಆ್ಯಂಟಿಕ್ ಸಿಲ್ವರ್ ಜುಮ್ಕಿ, ಮಲ್ಟಿಕಲರ್ ಒಡವೆ ಸೆಟ್‌ಗಳು ಉತ್ತಮ ಸಾಥ್ ನೀಡಬಹುದು. ■

## ಆಯ್ಕೆ ಹೀಗಿರಲಿ..

- ಹಬ್ಬದ ದಿನದಂದು ಉಟ್ಟುಕೊಳ್ಳಲು ಸೀರೆ ಖರೀದಿಸುವಾಗ ರೇಷ್ಮೆ ಸೀರೆಗಳಿಗೇ ಮೊದಲ ಆದ್ಯತೆ ಇರಲಿ. ಇದು ಹಬ್ಬದ ದಿನ ಸಾಂಪ್ರದಾಯಿಕ ಲುಕ್ ಕೊಡುತ್ತದೆ ಅಲ್ಲದೆ ಗ್ರ್ಯಾಂಡ್ ಆಗಿಯೂ ಕಾಣುತ್ತದೆ.
- ರೇಷ್ಮೆ ಸೀರೆ ದುಬಾರಿ ಎನಿಸಿದರೆ ಅಥವಾ ಇಷ್ಟವಾಗದಿದ್ದಲ್ಲಿ ಕಾಟನ್ ಸಿಲ್ಕ್, ಟಸ್ಸಾರ್ ಸಿಲ್ಕ್, ರಾ ಸಿಲ್ಕ್ ಸೀರೆಗಳನ್ನೂ ಆರಿಸಿಕೊಳ್ಳಬಹುದು.
- ಈಗೀಗ ಕಲಂಕಾರಿ, ಇಮಿಟೇಷನ್ ಸಿಲ್ಕ್ ಮುಂತಾದ ಹಗುರವಾದ ಸೀರೆಗಳು ಫ್ಯಾಷನ್ ಟ್ರೆಂಡ್ ಎನಿಸಿವೆ. ಇವು ಕೂಡ ಹಬ್ಬದ ದಿನಕ್ಕೆ ಸೂಕ್ತ ಎನಿಸುತ್ತವೆ.